**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ, ಆಳಂದ.**

ಸಿ.ಸಿ.ನಂಃ 8342/2022 ಸಿ.ಡಬ್ಲ್ಯೂ –1 ಪಿ.ಡಬ್ಲ್ಯೂ -1

| | | |
|---|---|---|
| ಹೆಸರು | ಃ | ಶಿವಾನಂದ |
| ತಂದೆಃ ಗಂಡ | ಃ | ಕೆಂಚಪ್ಪ |
| ವಯಸ್ಸು | ಃ | ೩೫ ವರ್ಷ |
| ಉದ್ಯೋಗ | : | ಕೂಲಿಕೆಲಸ |
| ವಾಸಸ್ಥಳ | ಃ | ಹಡಲಗಿ |

ದಿನಾಂಕಃ ೨೫.೧೧.೨೦೨೪

ಸತ್ಯ ಪ್ರತಿಜ್ಞೆಯ ಮೇರೆಗೆ

---

**ಮುಖ್ಯ ವಿಚಾರಣೆ ಮಾನ್ಯ ಸಸಅ ಅವರಿಂದ ಃ**

ಆರೋಪಿತರ ಪರಿಚಯ ಇರುತ್ತದೆ. ಚಾಸಾ-2 ರಿಂದ 5 ರವರ ಪರಿಚಯ ಇರುತ್ತದೆ.

ನಾನು ಆರೋಪಿತರ ಬಳಿ ನಮ್ಮ ಜಾಗಾ ಖಾಲಿ ಮಾಡಿ ಎಂದು ಹೇಳಲು ಹೋಗಿದ್ದೆನು, ಆಗ ಆರೋಪಿತರು ನನಗೆ ನಿಮೌನ ಎಂದು ಅವಾಚ್ಯ ಶಬ್ದಗಳಿಂದ ಬೈದು ಜೀವ ಬೆದರಿಕೆ ಹಾಕಿರುತ್ತಾರೆ. ನಂತರ ನಾನು ಠಾಣೆಗೆ ಬಂದು ಫಿರ್ಯಾದಿಯನ್ನು ಸಲ್ಲಿಸಿರುತ್ತೇನೆ. ಚಾಸಾ-೪ ಮತ್ತು ೫ ರವರು ಸದರಿ ಜಗಳವನ್ನು ಬಿಡಿಸಿರುತ್ತಾರೆ. ಸಾಕ್ಷಿ ಫಿರ್ಯಾದಿಯಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿರುವುದರಿಂದ, ಫಿರ್ಯಾದಿಯನ್ನು ನಿಪಿ-೧ ಎಂದು, ಸಹಿಯನ್ನು ನಿಪಿ-೧(ಎ) ಎಂದು ಗುರುತಿಸಲಾಯಿತು.

(ಈ ಹಂತದಲ್ಲಿ ಮಾನ್ಯ ಅಭಿಯೋಜಕರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿಯನ್ನು ಕೋರಿರುತ್ತಾರೆ. ಅನುಮತಿಸಲಾಯಿತು)

**ಪಾಟೀ ಸವಾಲು ಃ ಸ.ಸ.ಅ. ವಕೀಲರಿಂದ.**

ನನ್ನ ತಂದೆ ಹೆಸರಿನಲ್ಲಿ ಹಡಲಗಿ ಗ್ರಾಮದಲ್ಲಿ ೩೦*೨೦ ಜಾಗ ಇತ್ತು ಎಂದರೆ ಸರಿ. ನನ್ನ ತಂದೆ ತೀರಿಕೊಂಡ ನಂತರ ಅದನ್ನು ನನ್ನ ಹೆಸರಿನಲ್ಲಿ ವಾರಸಾ ಮಾಡಿಕೊಂಡಿರುತ್ತೇನೆ ಎಂದರೆ ಸರಿ. ಆರೋಪಿತರು ಸದರಿ ನಮ್ಮ ಜಾಗದಲ್ಲಿ ಕಟ್ಟಿಗೆ ಮತ್ತು ಕಲ್ಲುಗಳನ್ನು ಹಾಕಿರುತ್ತಾರೆ ಎಂದರೆ ಸರಿ. ಪಂಚಾಯತಿಯವರು ಆರೋಪಿತರಿಗೆ ಜಾಗ ಖಾಲಿ ಮಾಡಿ ಎಂದು ನೋಟಿಸನ್ನು ಸಹ ನೀಡಿರುತ್ತಾರೆ ಎಂದರೆ ಸರಿ. ಆರೋಪಿತರು ನಮಗೆ ನಿವೇಶನ ಖಾಲಿ ಮಾಡು ಎಂದು ಹೇಳುತ್ತಿಯಾ ಸೂಳೆ ಮಗನೇ ಎಂದು ಅವಾಚ್ಯ ಶಬ್ದಗಳಿಂದ ಬೈದರು ಎಂದರೆ ಸರಿ. ನನಗೆ ತಡೆದು ಕೈಯಿಂದ ಹೊಡೆದು ಹಿಂದಕ್ಕೆ ನೂಕಿಸಿರುತ್ತಾರೆ ಎಂದರೆ ಸರಿ. ದಿ.೦೪.೦೭.೨೦೨೨ ರಂದು ಘಟನಾ ಸ್ಥಳವನ್ನು ತೋರಿಸಿರುತ್ತೇನೆ ಎಂಧರೆ ಸರಿ. ಸದರಿ ಪಂಚನಾಮೆ ಕಾಲಕ್ಕೆ ಭಾವಚಿತ್ರವನ್ನು ತೆಗೆದುಕೊಂಡಿರುತ್ತಾರೆ ಎಂದರೆ ಸರಿ. ಸಾಕ್ಷಿ ಸದರಿ ಭಾವಚಿತ್ರದಲ್ಲಿನ ತನ್ನ ಇರುವಿಕೆಯನ್ನು ನೋಡಿ ಗುರುತಿಸಿರುತ್ತಾರೆ.

**ಪಾಟೀ ಸವಾಲು ಆರೋಪಿತರ ಪರ ಶ್ರೀ ಬಿ.ಜಿ.ಬಿ. ವಕೀಲರಿಂದ**

ಆರೋಪಿ ನಂ.೧ ಮತ್ತು ೨ ರವರ ತಾಯಿ ಸದರಿ ಜಾಗದಲ್ಲಿ ಸುಮಾರು ೧೦ ರಿಂದ ೧೫ ವರ್ಷ ವಾಸವಿದ್ದರು. ಅಲ್ಲೇ ಮನೆ ಕಟ್ಟಿಕೊಂಡು ಅವರು ಉಪಜೀವನ ನಡೆಸುತ್ತಿದ್ದರು ಎಂದರೆ ಸಾಕ್ಷಿಯು ಮನೆ ಕಟ್ಟಿರುವುದಿಲ್ಲ, ಅಲ್ಲೇ ಇರುತ್ತಿದ್ದರು ಎಂದು ನುಡಿಯುತ್ತಾರೆ. ನಮಗೆ ಒಟ್ಟು ಮೂರು ಜಾಗಗಳು ಇರುತ್ತವೆ. ಒಂದು ತಿಪ್ಪೆಯ ಜಾಗ, ಒಂದು ಖರೀದಿ ಹಿಡಿದ ಜಾಗ, ಒಂದು ಗಾಂವಠಾಣಾ ಜಾಗ ಇರುತ್ತದೆ. ಸದರಿ ಜಾಗವು ಸರಕಾರಿ ಜಾಗ ಇರುತ್ತದೆ ಎಂದರೆ ಸರಿ. ನನಗೆ ಓದಲು ಬರೆಯಲು ಬರುವುದಿಲ್ಲ ಎಂದರೆ ಸರಿ. ನನಗೆ ಫಿರ್ಯಾದಿ ಸಲ್ಲಿಸಲು ಯಾರೂ ಹೇಳಿರುವುದಿಲ್ಲ. ನಾನು ಫಿರ್ಯಾದಿಯನ್ನು ಮಾಡಿಯಾಳ ಗ್ರಾಮದಲ್ಲಿ ಗಣಕೀಕೃತ ಮಾಡಿಸಿ ನೀಡಿರುತ್ತೇನೆ. ಗಣಕೀಕೃತ ಮಾಡಲು ನಾನೇ ಮಾಹಿತಿ ನೀಡಿರುತ್ತೇನೆ. ನಿಪಿ-೧ನ್ನು ಪೋಲಿಸರು ಓದಿ ಹೇಳಿರುತ್ತಾರೆ, ಗಣಕೀಕೃತ ಮಾಡಿರುವವರು ಓದಿ ಹೇಳಿರುವುದಿಲ್ಲ. ನಾನು ಫಿರ್ಯಾದಿಯನ್ನು ದಿ.೦೩.೦೭.೨೦೨೨ ರಂದು ನೀಡಿರುತ್ತೇನೆ. ನಾನು ಪಿರ್ಯಾದಿ ಸಲ್ಲಿಸಿದ ಮರುದಿನದಂದು ಪೋಲಿಸರು ಪಂಚನಾಮೆ ಜರುಗಿಸಲು ಬಂದಿರುತ್ತಾರೆ. ಪಂಚನಾಮೆ ಕಾಲಕ್ಕೆ ಇಬ್ಬರು ಜನರು ಇದ್ದರು, ಬೇರೆ ಯಾರೂ ಇರಲಿಲ್ಲ.

ಘಟನಾ ಸ್ಥಳದ ಚೆಕಬಂದಿ ನನಗೆ ಹೇಳಲು ಬರುತ್ತದೆ. ಪೂರ್ವಕ್ಕೆ ದತ್ತಪ್ಪರವರ ಮನೆ, ಪಶ್ಚಿಮಕ್ಕೆ ಸೈದಪ್ಪನವರ ಮನೆ, ಉತ್ತರಕ್ಕೆ ರಸ್ತೆ, ದಕ್ಷಿಣಕ್ಕೆ ಮರಗಮ್ಮ ದೇವರ ಗುಡಿ ಇರುತ್ತದೆ. ಫಿರ್ಯಾದಿ ಸಲ್ಲಿಸಲು ನಾನು, ನಮ್ಮ ತಾಯಿ ಮತ್ತು ನನ್ನ ಸಹೋದರ ಹೋಗಿರುತ್ತೇವೆ. ನಿಮ್ಮ ಜಾಗವನ್ನು ನಿಮಗೆ ಬಿಟ್ಟುಕೊಡಲು ಆರೋಪಿತರು ಬಿಟ್ಟುಕೊಡಲು ತಯಾರಿರುತ್ತಾರೆ ಎಂದರೆ ಸಾಕ್ಷಿಯು ನನಗೆ ಭಯ ಇರುತ್ತದೆ ಎಂದು ನುಡಿಯುತ್ತಾರೆ. ಸದರಿ ಆರೋಪಿತರು ತಮ್ಮ ಕಲ್ಲುಗಳನ್ನು ಟ್ರಾಕ್ಟರನಲ್ಲಿ ತುಂಬಿಕೊಂಡು ಹೋಗುತ್ತಿದ್ದರು, ಮಂದಿಯ ಮಾತನ್ನು ಕೇಳಿಕೊಂಡು ಬಿಟ್ಟಿರುತ್ತಾರೆ ಎಂದು ನುಡಿಯುತ್ತಾರೆ. ಆರೋಪಿತರು ಊರಲ್ಲಿ ಇರುವುದಿಲ್ಲ, ಇಟ್ಟಂಗಿ ಭಟ್ಟಿ ಕೆಲಸಕ್ಕೆ ಹೋಗುತ್ತಾರೆ ಎಂದರೆ ಸರಿ. ಮನೆ ನಂಬರ್ ನನಗೆ ಹೇಳಲು ಬರುವುದಿಲ್ಲ. ನಾನು ಠಾಣೆಗೆ ಫಿರ್ಯಾದಿ ಸಲ್ಲಿಸಲು ೪.೦೦ ರಿಂದ ೪.೩೦ ಗಂಟೆಗೆ ಹೋಗಿರುತ್ತೇನೆ. ನನಗೆ ಘಟನೆಯಲ್ಲಿ ಯಾವುದೇ ಗಾಯಗಳು ಆಗಿರುವುದಿಲ್ಲ. ನಾನು ಆಸ್ಪತ್ರೆಗೆ ಹೋಗಿರುವುದಿಲ್ಲ. ಯಾವುದೇ ಘಟನೆ ನಡೆದಿರುವುದಿಲ್ಲ, ನಾನು ಖೊಟ್ಟಿ ಫಿರ್ಯಾದಿಯನ್ನು ಸಲ್ಲಿಸಿರುತ್ತೇನೆ ಎಂದರೆ ಸರಿ ಅಲ್ಲ. ಸರಕಾರಿ ಜಾಗದಲ್ಲಿ ಆರೋಪಿತರು ಶೆಡ್ಡನ್ನು ಹಾಕಿಕೊಂಡು ಉಪಜೀವಿಸುತ್ತಿದ್ದಾರೆ, ಸದರಿ ಜಾಗವನ್ನು ಕಬಳಿಸುವ ಉದ್ದೇಶದಿಂದ ಖೊಟ್ಟಿ ಫಿರ್ಯಾದಿ ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂಥರೆ ಸರಿ ಅಲ್ಲ.

ನಾನು ಆರೋಪಿತರ ಬಳಿ ನಮ್ಮ ಜಾಗಾ ಖಾಲಿ ಮಾಡಿ ಎಂದು ಹೇಳಲು ಹೋಗಿದ್ದೆನು, ಆಗ ಆರೋಪಿತರು ನನಗೆ ನಿಮೌನ ಎಂದು ಅವಾಚ್ಯ ಶಬ್ದಗಳಿಂದ ಬೈದು ಜೀವ ಬೆದರಿಕೆ ಹಾಕಿರುತ್ತಾರೆ, ನಂತರ ನಾನು ಠಾಣೆಗೆ ಬಂದು ಫಿರ್ಯಾದಿಯನ್ನು ಸಲ್ಲಿಸಿರುತ್ತೇನೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂಥರೆ ಸರಿ ಅಲ್ಲ. ನನ್ನ ತಂದೆ ಹೆಸರಿನಲ್ಲಿ ಹಡಲಗಿ ಗ್ರಾಮದಲ್ಲಿ ೩೦*೨೦ ಜಾಗ ಇತ್ತು ಎಂದರೆ ಸರಿ. ನನ್ನ ತಂದೆ ತೀರಿಕೊಂಡ ನಂತರ ಅದನ್ನು ನನ್ನ ಹೆಸರಿನಲ್ಲಿ ವಾರಸಾ ಮಾಡಿಕೊಂಡಿರುತ್ತೇನೆ, ಆರೋಪಿತರು ಸದರಿ ನಮ್ಮ ಜಾಗದಲ್ಲಿ ಕಟ್ಟಿಗೆ ಮತ್ತು ಕಲ್ಲುಗಳನ್ನು ಹಾಕಿರುತ್ತಾರೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂಥರೆ ಸರಿ ಅಲ್ಲ. ಪಂಚಾಯತಿಯವರು ಆರೋಪಿತರಿಗೆ ಜಾಗ ಖಾಲಿ ಮಾಡಿ ಎಂದು ನೋಟಿಸನ್ನು ಸಹ ನೀಡಿರುತ್ತಾರೆ, ಆರೋಪಿತರು ನಮಗೆ

ನಿವೇಶನ ಖಾಲಿ ಮಾಡು ಎಂದು ಹೇಳುತ್ತಿಯಾ ಸೂಳೆ ಮಗನೇ ಎಂದು ಅವಾಚ್ಯ ಶಬ್ದಗಳಿಂದ ಬೈದರು ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂಧರೆ ಸರಿ ಅಲ್ಲ. ನನಗೆ ತಡೆದು ಕೈಯಿಂದ ಹೊಡೆದು ಹಿಂದಕ್ಕೆ ನೂಕಿಸಿರುತ್ತಾರೆ, ದಿ.೦೪.೦೭.೨೦೨೨ ರಂದು ಘಟನಾ ಸ್ಥಳವನ್ನು ತೋರಿಸಿರುತ್ತೇನೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂಧರೆ ಸರಿ ಅಲ್ಲ.

**ಮರುವಿಚಾರಣೆಃ-** ಇರುವುದಿಲ್ಲ.

ಓ.ಹೇ.ಕೇ.ಸರಿ ಇದೆ.

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ.ಆಳಂದ